PW-1 : ಜಯಮ್ಮ

ದಿನಾಂಕಃ **13.12.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಡಿ.ವಿ.ಎಸ್. ವಕೀಲರಿಂದಃ</u>**

1. ಈ ದಾವೆ ಸಲ್ಲಿಸುವ ಮುನ್ನ ಕಿರಿಯ ವಿಭಾಗದ ನ್ಯಾಯಾಲಯದಲ್ಲಿ ಪ್ರತಿವಾದಿ 6 ರಿಂದ 8 ರವರು ಓ.ಎಸ್. 272/2017 ದಾವೆ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸಿದ ನಂತರ ಬೇರೆ ದಾವೆಗಳು ಇರುವ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಓ.ಎಸ್. 12/2013 ರಲ್ಲಿ ಪ್ರತಿವಾದಿ 6 ರಿಂದ 8 ರವರು ಪಕ್ಷಗಾರರಲ್ಲ. ಅವರು ನಮಗೆ ಸಂಬಂಧಿಸಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ಪಹಣಿ ನಮ್ಮ ತಂದೆಯ ಹೆಸರಿನಲ್ಲಿ ಇದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಆಗಿರುತ್ತದೆ. ಸ್ವತ್ತಿನ ವಿಭಾಗಕ್ಕಾಗಿ ನಾನು ನನ್ನ ತಂದೆಯ ಮೇಲೆ ದಾವೆ ಸಲ್ಲಿಸಿದ್ದೇನೆ. ಸ.ನಂ. 91, 124 ಮತ್ತು 129 ರ ಸ್ವತ್ತುಗಳು ಮೊದಲಿಗೆ ನಲ್ಲನಈರಪ್ಪ ರವರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಲ್ಲನಈರಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕಂದಿನಲ್ಲಿದ್ದಾಗ ನಲ್ಲನಈರಪ್ಪ ರವರನ್ನು ನೋಡಿದ್ದೇನೆ.

2. ನಲ್ಲನಈರಪ್ಪ ರವರಿಗೆ 3 ಜನ ಮಕ್ಕಳಿದ್ದು ಅವರೆಂದರೆ ನಲ್ಲನಿ ನಾರಾಪ್ಪ, ನಲ್ಲನಿ ವೆಂಕಟಪ್ಪ ಮತ್ತು ನಲ್ಲನಿ ತಿಮ್ಮಪ್ಪ ಎಂದರೆ ನನಗೆ ಗೊತ್ತಿರುವುದಿಲ್ಲ. ಚಿನ್ನಯ್ಯ ರವರ ಮಗ ಓಬಣ್ಣ ರವರನ್ನು ನಾನು ನೋಡಿರುವುದಿಲ್ಲ. ರಾಮಚಂದ್ರಪ್ಪ ರವರ ಮಗ ಲಕ್ಷ್ಮೀನಾರಾಯಣ ನನಗೆ ಗೊತ್ತಿಲ್ಲ. ನಲ್ಲನಿ ಈರಪ್ಪ ರವರು ಮೃತಪಟ್ಟ ನಂತರ ಅವರ 3 ಜನ ಮಕ್ಕಳು ದಾವಾ ಐಟಂ. 1, 5 ಮತ್ತು 6 ರ ಸ್ವತ್ತುಗಳಲ್ಲಿ ಸ್ವಾಧೀನಾನುಭೋಗದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಲ್ಲನಿಈರಪ್ಪ ರವರ ಮಗ ವೆಂಕಟಪ್ಪ ದಿನಾಂಕಃ 12.05.1927 ರಂದು ದಾವಾ ಷೆಡ್ಯೂಲ್ 1, 5 ಮತ್ತು 6 ರ

ಸ್ವತ್ತುಗಳನ್ನು ಪ್ರತಿವಾದಿ 1, 4 ಮತ್ತು 5 ರವರ ತಾತ ಸಂಜೀವಪ್ಪ ರವರ ಮಗ ಚೆನ್ನಯ್ಯ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳಿಗೆ 1/3 ನೇ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನಲ್ಲನಿ ಈರಪ್ಪ ಮತ್ತು ಅವರ ಮಕ್ಕಳು ಇಂದಿಗೂ ಸಹಾ ವಿಭಾಗ ಮಾಡಿಕೊಂಡಿಲ್ಲ ಎಂದು ನನಗೆ ಗೊತ್ತಿಲ್ಲ. ಸ್ವತ್ತುಗಳ ವಿಸ್ತೀರ್ಣ ಖರೀದಿ ಮಾಡಿದ ವಿಸ್ತೀರ್ಣಕ್ಕಿಂತಲ್ಲೂ ಹೆಚ್ಚಿನ ವಿಸ್ತೀರ್ಣಕ್ಕೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ತಪ್ಪಾಗಿ ಬರೆಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಓ.ಎಸ್. 12/2013 ರಂತೆ ಯಾವುದೇ ಹಕ್ಕು ಬರದೇ ಇದ್ದರೂ ವಿನಃ ಕಾರಣ ದಾವೆಯನ್ನು ಸಲ್ಲಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ತಂದೆಯ ವಿರುದ್ಧ ಕಿರಿಯ ವಿಭಾಗದ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.